

بِسْمِ اللّٰہِ الرَّحْمٰنِ الرَّحِیْمِ

# ಜಲ್ಸಾ ಸಾಲಾನ ಬೆಲ್ಜಿಯಂ – 2018

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು **ಬೆಲ್ಜಿಯಂ** ನಿಂದ 14-09-2018 ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

*(ತಶಹ್ಹುದ್, ತಅವ್ವುದ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್ ಹೀಗೆ ಹೇಳಿದರು:*

ಅಲ್ಲಾಹನ ಅನುಗ್ರಹದಿಂದ ಇಂದಿನಿಂದ ಬೆಲ್ಜಿಯಂ ದೇಶದ ಅಹ್ಮದಿಯಾ ಜಮಾಅತಿನ ಜಲ್ಸ ಸಾಲಾನ ಪ್ರಾರಂಭವಾಗುತ್ತಿದೆ. ಬಹಳ ದೀರ್ಘಕಾಲದ ನಂತರ ನಾನು ನಿಮ್ಮ ಜಲ್ಸದಲ್ಲಿ ಭಾಗವಹಿಸುತ್ತಿದ್ದೇನೆ. ಈ ಕಾಲಾವಧಿಯಲ್ಲಿ ಜಮಾಅತ್‌ನ ಸದಸ್ಯರ ಸಂಖ್ಯೆ ವರ್ಧಿಸಿದೆ. ಬೇರೆ ಅನೇಕ ವಿಷಯಗಳಿಗೆ ಸಂಬಂಧಿಸಿ ಸಹ ಅಭಿವೃದ್ಧಿ ಉಂಟಾಗಿದೆ. ಉದಾಹರಣೆಗೆ ಹೇಳುವುದಾದರೆ ಮಿಶನ್ ಹೌಸ್‌ಗಳ ಸಂಖ್ಯೆ ವರ್ಧಿಸಿದೆ. ಮಸ್‌ಜಿದ್‌ಗಳ ಮತ್ತು ನಮಾಝ್ ಸೆಂಟರ್‌ಗಳ ಸಂಖ್ಯೆಯೂ ವರ್ಧಿಸಿದೆ. ಬ್ರಸ್ಸೆಲ್ಸ್‌ನಲ್ಲಿ ನಿರ್ಮಾಣವಾಗುತ್ತಿರುವ ಮಸ್‌ಜಿದ್ ನಿರ್ಮಾಣದ ಕೊನೆಯ ಹಂತಕ್ಕೆ ತಲಪಿದೆ. ಅದು ಸಹ ಚಲೋದಾದ ಮಸ್‌ಜಿದ್ ಆಗಿ ನಿರ್ಮಿಸಲ್ಪಡುತ್ತಿದೆ. ಮೊನ್ನೆ ಬಾಲ್ಕನ್ ಎಂಬಲ್ಲಿ ಒಂದು ಮಸ್‌ಜಿದನ್ನು ನಾನು ಉದ್ಘಾಟಿಸಿದೆ. ಅಲ್ಲಾಹನು ಬಹಳ ವಿಶಾಲವಾದ ಸ್ಥಳವನ್ನು ಮತ್ತು ಕಟ್ಟಡವನ್ನು ಜಮಾಅತಿಗೆ ನೀಡಿರುವನು. ಬಾಹ್ಯವಾಗಿ ಇಲ್ಲಿ ಜಮಾಅತಿನ ಮೇಲೆ ಬಹಳ ಅನುಗ್ರಹ ಸುರಿಯಲ್ಪಡುವುದಾಗಿ ನಾವು ನೋಡುತ್ತೇವೆ. ಈ ಅನುಗ್ರಹದ ಬಗ್ಗೆ ಪ್ರಜ್ಞೆ ಜಮಾಅತಿನ ಜನರಲ್ಲಿ ಹುಟ್ಟಿಸುವಂತಾಗಬೇಕು. ನಾವು ಅಲ್ಲಾಹನ ಆಜ್ಞೆಗಳನ್ನು ಮನವರಿಕೆ ಮಾಡಿಕೊಂಡು ಅವುಗಳನ್ನು ನಂಬುತ್ತಾ ಅನುಷ್ಠಾನಕ್ಕೆ ತರುವವರಾಗಬೇಕು. ಕೇವಲ ಬಾಹ್ಯವಾಗಿ ಅಲ್ಲ ವಾಸ್ತವಿಕವಾಗಿ ನಮ್ಮ ಮೊದಲಿನ ಸ್ಥಿತಿಗಿಂತ ನಮ್ಮ ಈಗಿನ ಸ್ಥಿತಿ ಉತ್ತಮಗೊಳ್ಳಬೇಕು. ನಮ್ಮ ಪ್ರತಿ ದಿನ ಮತ್ತು ಪ್ರತಿ ಹೆಜ್ಜೆ ಹಿಂದಿನ ದಿನಕ್ಕಿಂತ ಮತ್ತು ಹಿಂದಿನ ಹೆಜ್ಜೆಗಿಂತ ಒಳಿತಿನಲ್ಲಿ, ತಖ್ವದಲ್ಲಿ ಮತ್ತು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಆಗಮನ ಉದ್ದೇಶಲಕ್ಷ್ಯವನ್ನು ಈಡೇರಿಸುವುದರಲ್ಲಿ ಅಭಿವೃದ್ಧಿ ಗಳಿಸುತ್ತಾ ಮುಂದೆ ಸಾಗುತ್ತಾ ಇರುವುದಾಗಿ ಕಾಣಿಸಬೇಕಾಗಿದೆ. ನಾವು ನಮ್ಮ ಕೆಡುಕುಗಳನ್ನು ತ್ಯಜಿಸಿದವರಾಗಬೇಕು ಮತ್ತು ಒಳಿತಿನ ಹೊಸ ಮಜಲುಗಳನ್ನು ದಾಟುತ್ತಾ ಹೋಗುವವರಾಗಬೇಕು. ಅಹ್ಮದಿಯಾ ಜಮಾಅತಿನ ಸದಸ್ಯರಲ್ಲಿ ಈ ವಿಷಯಗಳು ಕಾಣಿಸಿಕೊಳ್ಳುವುದಾದರೆ ನಾವು ಹೇಳಬಲ್ಲೆವು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಆಗಮನದ ಉದ್ದೇಶಲಕ್ಷ್ಯವನ್ನು ನಾವು ಗಳಿಸಿದೆವು ಎಂದು ಅಥವಾ ಅವುಗಳನ್ನು ಗಳಿಸಲು ಪ್ರಯತ್ನಿಸುತ್ತಿದ್ದೇವೆ ಎಂದು. ಮತ್ತು ನಾವು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಬೈಅತ್ ಮಾಡಿ ಹೊಂದಿದ ಹೊಣೆಗಾರಿಕೆಗಳನ್ನು ಈಡೇರಿಸಲು ಪ್ರಯತ್ನಿಸುತ್ತಿದ್ದೇವೆ ಎಂದು.

ನೀವು ಈ ವಿಷಯವನ್ನು ನೆನಪಿನಲ್ಲಿರಿಸಬೇಕು. ನೀವು ಈ ದೇಶಕ್ಕೆ ಧರ್ಮದ ಹೆಸರಿನಲ್ಲಿ, ಅಲ್ಲಾಹನ ಹೆಸರಿನಲ್ಲಿ ಆಗಮಿಸಿರುವಿರಿ. ಆದರೆ ನೀವು ಅಲ್ಲಾಹನ ಆಜ್ಞೆಗಳನ್ನು ಅನುಷ್ಠಾನಕ್ಕೆ ತರದಿದ್ದರೆ ನೀವು ಅಲ್ಲಾಹನ ಕೋಪಕ್ಕೆ ಪಾತ್ರರಾಗುವಿರಿ. ಒಂದು ಮಿತಿಯೊಳಗೆ ಲೌಕಿಕ ಕಾರ್ಯಗಳ ಬಗ್ಗೆ ಗಮನ ಹರಿಸುವುದು ಮತ್ತು ಲೌಕಿಕ ಲಾಭ ಗಳಿಸುವುದು ಪಾಪದೋಷವನ್ನು ಉಂಟುಮಾಡಲಾರದು. ಆದರೆ ಲೌಕಿಕವಾದಿ ಜನರ ಹಾಗೆ ಲೌಕಿಕ ವಿಷಯಗಳಲ್ಲಿ ಮಾತ್ರ ತಲ್ಲೀನರಾಗುವುದನ್ನು ಅಲ್ಲಾಹನು ನಿಷಿದ್ಧಗೊಳಿಸಿರುವನು. ಇದಕ್ಕೆ ಸಂಬಂಧಿಸಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೀಗೆ ಹೇಳುತ್ತಾರೆ: ಅಲ್ಲಾಹನು ಲೌಕಿಕ ವೃತ್ತಿಗಳನ್ನು ಧರ್ಮಬದ್ಧವೆಂದು ವಿಧಿಸಿದ್ದಾನೆ. ಯಾಕೆಂದರೆ ಈ ಮಾರ್ಗದಲ್ಲಿಯೂ ಪರೀಕ್ಷೆಗಳು ತಲೆದೋರುತ್ತವೆ. ಈ ಪರೀಕ್ಷೆಯ ಕಾರಣದಿಂದ ಮನುಷ್ಯನು ಜುಗಾರಿಕೋರನೂ, ಠಕ್ಕನೂ, ಡಕಾಯಿತಿಯೂ ಆಗುತ್ತಾನೆ. ಅವನು ಏನೆಲ್ಲಾ ಕೆಟ್ಟ ಸ್ವಭಾವ ಗುಣಗಳನ್ನು ಮೈಗೂಡಿಸುತ್ತಾನೆ. ಆದರೆ ಪ್ರತಿಯೊಂದು ವಸ್ತುವಿಗೆ ಒಂದು ಹದ್ದುಬಸ್ತು ಇರುತ್ತದೆ. ನೀವು ಲೌಕಿಕ ವೃತ್ತಿಗಳನ್ನು ಹೇಗೆ ಮೈಗೂಡಿಸಬೇಕೆಂದರೆ ಅವು ಧರ್ಮದ ಮಾರ್ಗದಲ್ಲಿ ನಿಮಗೆ ಸಹಾಯಕವಾದ ಸಾಮಗ್ರಿಗಳನ್ನು ಹುಟ್ಟಿಸಬೇಕು. ನಿಮ್ಮ ಮುಖ್ಯ ಉದ್ದೇಶಲಕ್ಷ್ಯ ಧರ್ಮವೇ ಆಗಿರಬೇಕು. ಆದುದರಿಂದ ನಾವು ಲೌಕಿಕ ವೃತ್ತಿಗಳನ್ನು ನಿಷಿದ್ಧಗೊಳಿಸುವುದಿಲ್ಲ.

ಲೌಕಿಕವಾಗಿ ಸಂಪಾದನೆ ಮಾಡಬೇಕಾದುದು ನಾವು ಅಲ್ಲಾಹನ ಆಜ್ಞೆ ಪ್ರಕಾರ ಹೆಂಡತಿ ಮತ್ತು ಮಕ್ಕಳಿಗೆ ಸಂಬಂಧಿಸಿ ನಮ್ಮ ಹೊಣೆಗಾರಿಕೆಗಳನ್ನು ಈಡೇರಿಸಲಿಕ್ಕಾಗಿಯೂ ಅಲ್ಲಾಹನ ಸೃಷ್ಟಿಗಳಿಗೆ ಸಂಬಂಧಿಸಿದ ಹಕ್ಕುಗಳನ್ನು ನೀಡಲಿಕ್ಕಾಗಿಯೂ ಅಲ್ಲಾಹನ ಧರ್ಮಕ್ಕೆ ಸೇವೆ ಸಲ್ಲಿಸಲಿಕ್ಕಾಗಿಯೂ ಆಗಿರಬೇಕು. ಈ ಉದ್ದೇಶಗಳನ್ನು ಹೊಂದುವುದಾದರೆ ಧರ್ಮವೂ ಸಿಗುವುದು. ಲೌಕಿಕ ಲಾಭವೂ ಸಿಗುವುದು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಲೌಕಿಕ ಸಂಪಾದನೆಯ ಉದ್ದೇಶ ಧರ್ಮಕ್ಕೆ ಸೇವೆ ಸಲ್ಲಿಸುವುದಾಗಿರಬೇಕು ಎಂದು ವಿವರಿಸುತ್ತಾ ಮತ್ತೊಂದು ಸ್ಥಳದಲ್ಲಿ ಹೀಗೆ ಹೇಳುತ್ತಾರೆ: ಇಸ್ಲಾಮ್ ಸನ್ಯಾಸವನ್ನು ನಿಷಿದ್ಧಗೊಳಿಸಿದೆ. ಸತ್ಯವಿಶ್ವಾಸಿಯ ಸಂಬಂಧಗಳು ಲೋಕದೊಂದಿಗೆ ವಿಶಾಲವಾದ ಹಾಗೆ ಅವು ಸತ್ಯವಿಶ್ವಾಸಿಗೆ ಉನ್ನತ ಪದವಿ ಗಳಿಸಲು ಸಹಾಯಕವಾಗುತ್ತವೆ. ಏಕೆಂದರೆ ಅವನ ಉದ್ದೇಶಲಕ್ಷ್ಯ ಧರ್ಮವಾಗಿರುತ್ತವೆ. ಲೋಕ ಮತ್ತು ಅದರ ಸಂಪತ್ತು ಧರ್ಮದ ಸೇವಕನಾಗಿರುತ್ತವೆ. ಇದರ ಅರ್ಥವೇನೆಂದರೆ ಸಂಪತ್ತು ಒಂದು ಸವಾರಿ ಮೃಗವಾಗಿದೆ. ಅದರ ಮೇಲೆ ಕುಳಿತುಕೊಂಡು ಮನುಷ್ಯನು ಧರ್ಮದ ಉನ್ನತ ಮಜಲುಗಳ ತನಕ ತಲಪುತ್ತಾನೆ. ಅಲ್ಲಾಹನು ನಮಗೆ ಈ ಪ್ರಾರ್ಥನೆ ಕಲಿಸಿದ್ದಾನೆ. **ರಬ್ಬನಾ ಆತಿನಾ ಫಿದ್ದುನ್‌ಯಾ ಹಸನತನ್ ವಫಿಲ್ ಆಖಿರತಿ ಹಸನತನ್** (ಓ ನಮ್ಮ ಪ್ರಭು ನಮಗೆ ಇಹಲೋಕದಲ್ಲಿಯೂ ಒಳಿತನ್ನು ನೀಡು. ಪರಲೋಕದಲ್ಲಿಯೂ ಒಳಿತನ್ನು ನೀಡು.)

ಈ ಪ್ರಾರ್ಥನೆಯಲ್ಲಿ ಇಹಲೋಕವನ್ನು ಮೊದಲು ಹೇಳಲಾಗಿದೆ. ಆದರೆ ಎಂತಹ ಲೋಕವನ್ನು ಹಸನತುದ್ದುನ್‌ಯಾ ಎಂದು ಲೌಕಿಕ ಒಳಿತುಗಳ ಮುಂದೆ ಇರಿಸಲಾಗಿದೆಯೋ ಅದು ಪರಲೋಕದಲ್ಲಿ ದೊರಕುವ ಒಳಿತುಗಳಿಗೆ ಕಾರಣವಾಗಬೇಕಾಗಿದೆ. ಈ ಪ್ರಾರ್ಥನೆಯನ್ನು ಅಲ್ಲಾಹನು ಕಲಿಸಿರುವುದರಿಂದ ಸ್ಪಷ್ಟವಾಗುವುದೇನೆಂದರೆ ಮನುಷ್ಯನು ಲೌಕಿಕವಾದ ಒಳಿತುಗಳನ್ನು ಗಳಿಸುವುದರ ಉದ್ದೇಶಲಕ್ಷ್ಯ ಪರಲೋಕದ ಒಳಿತುಗಳನ್ನು ಗಳಿಸುವುದಾಗಿರಬೇಕು. ಈ ಪ್ರಾರ್ಥನೆಯಲ್ಲಿ ಪ್ರಸ್ತಾಪಿಸಿರುವ ಹಸನತುದ್ದುನ್‌ಯಾ ಎಂಬ ಶಬ್ದದಲ್ಲಿ ಲೌಕಿಕ ಸಂಪಾದನೆ ಮಾಡಲು ಸಹಾಯಕವಾದ ಎಲ್ಲಾ ಉತ್ತಮ ಮಾರ್ಗಗಳ ಬಗ್ಗೆ ಸೂಚಿಸಲಾಗಿದೆ.

ಲೌಕಿಕ ಲಾಭ ಪಡೆಯಲು ಪ್ರತಿಯೊಂದು ರೀತಿಯ ಒಳಿತನ್ನು ಅವಲಂಬಿಸಬೇಕು. ಅದು ಎಲ್ಲಾ ರೀತಿಗಳಲ್ಲಿಯೂ ಉತ್ತಮವೂ ಒಳಿತುಭರಿತವೂ ಆಗಿರಬೇಕು. ಬೇರೆ ಮನುಷ್ಯರಿಗೆ ಅವು ನೋವನ್ನುಂಟು ಮಾಡದವುಗಳೂ ಆಗಬೇಕು. ಅವು ನಾಚಿಕೆಗೇಡಿನ ಕೆಲಸವಾಗಬಾರದು. ಇಂತಹ ರೀತಿಯಲ್ಲಿ ಲೌಕಿಕ ಲಾಭವನ್ನು ಗಳಿಸುವುದು ಪರಲೋಕದ ಒಳಿತುಗಳ ಸಂಪಾದನೆಗೆ ಸಹಾಯಕವಾಗುವುದು.

ಆದುದರಿಂದ ನಮ್ಮ ಪೈಕಿ ಪ್ರತಿಯೊಬ್ಬನು ಪರಲೋಕದ ಒಳಿತುಗಳನ್ನು ಗಳಿಸಲು ಸಹಾಯಕವಾದ ಲೌಕಿಕ ಲಾಭಗಳನ್ನು ಗಳಿಸಲು ಪ್ರಯತ್ನಿಸಬೇಕು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ನೀವು ಯೋಚಿಸಬೇಡಿರಿ, ಬಾಹ್ಯ ಸಂಪತ್ತು, ಅಧಿಕಾರ, ಸಂತಾನಗಳ ವರ್ಧನೆ, ಒಬ್ಬ ವ್ಯಕ್ತಿಗೆ ಸುಖಕರವಾಗುವುದು ಎಂದು ಭಾವಿಸಬೇಡಿರಿ. ಅಂತಹ ವ್ಯಕ್ತಿ ಸ್ವರ್ಗ ಗಳಿಸುವನೆಂದು ಭಾವಿಸಬೇಡಿರಿ. ಖಂಡಿತವಾಗಿ ಹಾಗೆ ಆಗಲಾರದು. ನೆಮ್ಮದಿ ಮತ್ತು ಸಮಾಧಾನ ಸ್ವರ್ಗದ ಅನುಗ್ರಹಗಳಲ್ಲಿ ಸೇರಿವೆ. ಆದರೆ ಅವು ಇವುಗಳಿಂದ ಸಿಗಲಾರದು. ಅಲ್ಲಾಹನಲ್ಲಿ ಜೀವಿಸುವುದು ಮತ್ತು ಮೃತನಾಗುವುದರಲ್ಲಿಯೇ ನೆಮ್ಮದಿ ಸಿಗುವುದು. ಪ್ರವಾದಿಗಳು ಮತ್ತು ವಿಶಿಷ್ಟವಾಗಿ ಹಝ್ರತ್ ಇಬ್ರಾಹೀಮ್ ಮತ್ತು ಯಅ್‌ಖೂಬ್ ಅಲೈಹಿಸ್ಸಲಾಮ್ ಹೀಗೆ ಹೇಳಿದ್ದರು: **ಫಲಾತಮೂತುನ್ನ ಇಲ್ಲಾ ವ ಅನ್‌ತುಮ್ ಮುಸ್ಲಿಮೂನ್** – ನೀವು ಸಂಪೂರ್ಣವಾಗಿ ಅಲ್ಲಾಹನ ಆಜ್ಞಾನುವರ್ತಿಗಳಾಗುವ ತನಕ ಮೃತರಾಗಬಾರದು. ನೀವು ಸದಾ ಸಮಯ ಅಲ್ಲಾಹನ ಅನುಸರಣೆಯ ಸ್ಥಿತಿಯಲ್ಲೇ ಇರಬೇಕು ಎಂದು ಇದರ ಅರ್ಥವಾಗಿದೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಹೇಳುತ್ತಾರೆ: ಲೌಕಿಕ ಆಶಾಭಿಲಾಷೆಗಳು ಒಂದು ರೀತಿಯ ಕೊಳಕು ದುರಾಶೆಯನ್ನು ಸೃಷ್ಟಿಸುತ್ತವೆ. ಅದು ಲೌಕಿಕ ದಾಹವನ್ನೂ ಹಸಿವನ್ನೂ ವರ್ಧಿಸುತ್ತವೆ. ಅನಾವಶ್ಯಕ ದುರಾಶೆಗಳ ಅಗ್ನಿ ಮನುಷ್ಯನ ಹೃದಯಕ್ಕೆ ಶಾಂತಿಯನ್ನು ನೀಡಲಾರದು. ಅದು ಹೃದಯವನ್ನು ಆತಂಕ ಭರಿತವನ್ನಾಗಿಯೂ ತಪ್ಪು ಮಾಡುವುದಾಗಿಯೂ ಪರಿವರ್ತಿಸುತ್ತವೆ. ಆದುದರಿಂದ ನನ್ನ ಸ್ನೇಹಿತರು ಈ ವಿಷಯವನ್ನು ಗಮನದಲ್ಲಿರಿಸಿರಿ. ಮನುಷ್ಯನು ಧನ, ಸಂಪತ್ತು, ಹೆಣ್ಣು, ಮತ್ತು ಸಂತಾನ ಮೊದಲಾದವುಗಳನ್ನು ಪ್ರೀತಿಸುವ ನಶೆಯಲ್ಲಿ ಹುಚ್ಚನ ಹಾಗೆ ತನ್ನನ್ನು ಮರೆತವನಾಗಬಾರದು. ಅವನ ಮತ್ತು ಅಲ್ಲಾಹನ ಮಧ್ಯೆ ಒಂದು ಪರದೆ ತಲೆದೋರಬಾರದು. ಸಂಪತ್ತು ಮತ್ತು ಸಂತಾನಗಳನ್ನು ಫಿತ್ನ (ಪರೀಕ್ಷೆ) ಎಂದು ಹೇಳಿರುವುದು ಏಕೆಂದರೆ ಅವು ಅಲ್ಲಾಹನ ಮತ್ತು ದಾಸನ ಮಧ್ಯೆ ಒಂದು ತಡೆಯನ್ನು ಸೃಷ್ಟಿಸುತ್ತವೆ. ಸಂಪತ್ತು ಮತ್ತು ಸಂತಾನಗಳಿಂದಲೂ ಮನುಷ್ಯನಿಗೆ ಒಂದು ನರಕ ಸೃಷ್ಟಿಸಲ್ಪಡುತ್ತವೆ. ಅವುಗಳಿಂದ ದೂರ ಸರಿಸಲ್ಪಡುವಾಗ ಅವನಿಗೆ ಕಠಿಣವಾದ ಅಸ್ವಸ್ಥತೆ ಮತ್ತು ಗಾಬರಿ ತಲೆದೋರುತ್ತದೆ. ಎರಡು ವಸ್ತುಗಳ ಪರಸ್ಪರ ಸಂಬಂಧದಿಂದ ಮತ್ತು ಸಂಘರ್ಷದಿಂದ ತಾಪ ಸೃಷ್ಟಿಸಲ್ಪಡುತ್ತದೆ. ಅದೇ ರೀತಿ ಮನುಷ್ಯನು ಅಲ್ಲಾಹನ ಬಗ್ಗೆ ಹೊಂದಿದ ಪ್ರೀತಿ ಮತ್ತು ಲೋಕದ ಬಗ್ಗೆ ಹೊಂದಿದ ಪ್ರೀತಿಯ ಸಂಘರ್ಷದಿಂದ ಉಂಟಾಗುವ ತಾಪದಿಂದ ಅಲ್ಲಾಹನ ಬಗ್ಗೆ ಅವನಿಗಿರುವ ಪ್ರೀತಿ ಸುಟ್ಟು ಹೋಗುತ್ತದೆ. ಹೃದಯ ಅಂಧಕಾರ ಮಯವಾಗಿ ಅಲ್ಲಾಹನಿಂದ ದೂರ ಸರಿಯುತ್ತದೆ. ಮತ್ತು ಎಲ್ಲಾ ವಿಧಗಳ ನಿರರ್ಥಕ ಕರ್ಮಗಳಿಗೆ ಬಲಿಯಾಗುತ್ತದೆ. ಆದರೆ ಲೌಕಿಕ ವಸ್ತುಗಳೊಂದಿಗೆ ಸಂಬಂಧವು ಅಲ್ಲಾಹನ ಮುಂದೆ ಸ್ಥಾಪಿಸಲ್ಪಡುವುದಾದರೆ ಪರಸ್ಪರ ಸಂಘರ್ಷದಿಂದ ದೇವೇತರದ ಬಗ್ಗೆ ಪ್ರೀತಿ ಸುಟ್ಟು ಹೋಗುತ್ತದೆ ಮತ್ತು ಅದರ ಸ್ಥಾನದಲ್ಲಿ ಒಂದು ಪ್ರಕಾಶ ತುಂಬಿಸಲ್ಪಡುತ್ತದೆ. ಅಂತಹ ಸ್ಥಿತಿಯಲ್ಲಿ ಅಲ್ಲಾಹನು ಇಚ್ಛಿಸುವುದನ್ನೇ ದಾಸನು ಇಚ್ಛಿಸುತ್ತಾನೆ.

ಜಲ್ಸದಲ್ಲಿ ಭಾಗವಹಿಸುವ ಪ್ರತಿಯೊಬ್ಬರೂ ಅಲ್ಲಾಹನಿಗೆ ಸಮೀಪವಾಗಿರಬೇಕೆಂಬ ಉದ್ದೇಶಲಕ್ಷ್ಯವನ್ನು ಹೊಂದಬೇಕು. ಧರ್ಮ ಕಾರ್ಯಗಳಿಗೆ ಆದ್ಯತೆ ನೀಡುವವರಾಗಬೇಕು. ಲೋಕದಲ್ಲಿ ವಾಸಿಸುತ್ತಿರುವಾಗ ಲೌಕಿಕ ವಿಷಯಗಳನ್ನು ಧಾರ್ಮಿಕ ವಿಷಯಗಳ ಸೇವಕನನ್ನಾಗಿ ಮಾಡುವವರಾಗಬೇಕು. ಇಂತಹ ಮನೋಭಾವವನ್ನು ನೀವು ನಿಮ್ಮೊಳಗೆ ಮಾತ್ರವಲ್ಲ ನಿಮ್ಮ ಮಕ್ಕಳೊಳಗೆ ಸಹ ಇದರ ಆತ್ಮವನ್ನು ಊದುವವರಾಗಬೇಕು. ಅಲ್ಲಾಹನು ನಮ್ಮಿಂದ ಏನನ್ನು ಇಚ್ಛಿಸುತ್ತಾನೆ ಮತ್ತು ಮನುಷ್ಯನ ಜೀವಿತದ ಉದ್ದೇಶಲಕ್ಷ್ಯವೇನು ಎಂಬುದರ ಬಗ್ಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ಈ ವಿನೀತನನ್ನು ಬೈಅತ್ ಮಾಡಿದವರು ತಿಳಿಯಬೇಕಾದುದೇನೆಂದರೆ ಬೈಅತ್ ಮಾಡಿದುದರ ಉದ್ದೇಶ ಲೌಕಿಕ ಅಭಿಲಾಷೆಗಳು ತಣ್ಣಗಾಗಬೇಕು ಮತ್ತು ಕಾರುಣ್ಯಮಯನಾದ ಅಲ್ಲಾಹನ ಬಗ್ಗೆ ಪ್ರೀತಿ ಮತ್ತು ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಬಗ್ಗೆ ಪ್ರೀತಿ ಹೃದಯಗಳ ಮೇಲೆ ಜಯಗಳಿಸಬೇಕು. ಮತ್ತು ಎಂತಹ ಸ್ಥಿತಿ ತಲೆದೋರಬೇಕೆಂದರೆ ಪರಲೋಕದ ಕಡೆಗೆ ಸಂಚಾರ ಅತೃಪ್ತಿಕರವಾಗಬಾರದು. ಅಲ್ಲಾಹನ ಬಗ್ಗೆ ಮತ್ತು ಅವನ ಸಂದೇಶವಾಹಕರ ಬಗ್ಗೆ ಪರಿಪೂರ್ಣವಾದ ಪ್ರೀತಿ ಉಂಟಾಗುವ ತನಕ ಲೌಕಿಕವಾದ ಪ್ರೀತಿಯಲ್ಲಿ ಕೊರತೆ ತಲೆದೋರದು ಮತ್ತು ಮನುಷ್ಯನಿಗೆ ಮೃತನಾಗುವಾಗ ಹೃದಯದಲ್ಲಿ ಸಮಾಧಾನವಿರಲಾರದು.

ಜಲ್ಸಗಳು ಆರಂಭವಾಗಲು ತೊಡಗಿದಾಗ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರಿಗೆ ಒಮ್ಮೆ ಹೀಗೆ ತಿಳಿದು ಬಂತು, ಜನರು ಜಲ್ಸದ ಉದ್ದೇಶಲಕ್ಷ್ಯಗಳನ್ನು ಈಡೇರಿಸುತ್ತಾ ಇಲ್ಲ ಎಂದು. ಆಗ ಅವರು ತೀವ್ರ ಅತೃಪ್ತಿ

ಸೂಚಿಸಿದರು. ಅವರು ಹೇಳಿದರು: ಈ ವರ್ಷ ನಾನು ಜಲ್ಸ ಸಾಲಾನ ಜರಗಿಸಲಾರೆನು ಎಂದು. ಆ ವರ್ಷ ಜಲ್ಸಸಾಲಾನ ಜರಗಲಿಲ್ಲ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಜೀವಿಸಿದ್ದ ಕಾಲಘಟ್ಟದಲ್ಲಿ ಸಹ ಕೆಲವು ಜನರು ತಮ್ಮ ಬಲಹೀನತೆಗಳ ಕಾರಣದಿಂದ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಅತೃಪ್ತಿಗೆ ಪಾತ್ರರಾಗಿರುವಾಗ ಈಗಿನ ಕಾಲದಲ್ಲಿ ಅಂತಹ ಜನರ ಸಂಖ್ಯೆ ಎಷ್ಟಿರಬಹುದೆಂದು ಅಲ್ಲಾಹನಿಗೆ ಮಾತ್ರ ತಿಳಿದಿದೆ. ಆದುದರಿಂದ ಪ್ರತಿಯೊಬ್ಬನು ತನ್ನನ್ನು ಪರಿಶೋಧಿಸಬೇಕು. ಜಲ್ಸದಲ್ಲಿ ಭಾಗವಹಿಸುವವರು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಇಚ್ಛಿಸಿದ ಮಟ್ಟವನ್ನು ತಲಪುವುದಿಲ್ಲವಾದರೆ ಅಂತಹ ಜನರು ಜಲ್ಸದಲ್ಲಿ ಭಾಗವಹಿಸುವ ಹಕ್ಕುದಾರರೂ ಆಗುವುದಿಲ್ಲ. ಪ್ರತಿಯೊಬ್ಬ ಅಹ್ಮದಿಯ ಹೃದಯದಲ್ಲಿ ಇದಕ್ಕೆ ಸಂಬಂಧಿಸಿ ಚಿಂತೆ ತಲೆದೋರಬೇಕಾಗಿದೆ. ಈಗ ವಿವಿಧ ದೇಶಗಳಲ್ಲಿ ಪ್ರತಿವರ್ಷ ಜಲ್ಸಗಳು ಜರಗುತ್ತಾ ಇವೆ. ಕೆಲವು ಜಲ್ಸಗಳಲ್ಲಿ ನಾನು ಸ್ವತಃ ಭಾಗವಹಿಸುತ್ತೇನೆ. ಕೆಲವು ಜಲ್ಸಗಳಲ್ಲಿ ಎಂ.ಟಿ.ಎ. ಮೂಲಕ ಭಾಗವಹಿಸುತ್ತೇನೆ. ಯುರೋಪಿನ ಜಲ್ಸಗಳಲ್ಲಿ ನಿಮ್ಮ ಪೈಕಿ ಅನೇಕ ಜನರು ಭಾಗವಹಿಸುತ್ತಾರೆ. ಈಗ ನನ್ನ ಮುಂದೆ ಕುಳಿತಿರುವವರಲ್ಲಿ ಹಲವರು ಹಲವು ಜಲ್ಸಗಳಲ್ಲಿ ಭಾಗವಹಿಸಿದವರಾಗಿದ್ದಾರೆ. ಒಂದು ವರ್ಷದಲ್ಲಿ ಒಂದಕ್ಕಿಂತ ಹೆಚ್ಚು ಜಲ್ಸಗಳಲ್ಲಿ ಭಾಗವಹಿಸುವಾಗ ನಮ್ಮಲ್ಲಿ ಒಂದು ಕ್ರಾಂತಿದಾಯಕ ಪರಿವರ್ತನೆ ತಲೆದೋರಬೇಕಾಗಿದೆ. ಆ ಕಾಲಘಟ್ಟದಲ್ಲಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳಿದರು: ನೀವು ವರ್ಷದಲ್ಲಿ ಒಮ್ಮೆ ಜಲ್ಸದಲ್ಲಿ ಭಾಗವಹಿಸಿರಿ. ಆ ಮೂಲಕ ನಿಮ್ಮಲ್ಲಿ ಉತ್ತಮ ಪರಿವರ್ತನೆ ತಲೆದೋರಲಿ. ಪರಲೋಕದ ಕಡೆಗೆ ನಿಮ್ಮ ಸಂಚಾರ ಅತೃಪ್ತಿಕರವಾಗದಿರಲಿ. ಆದರೆ ಈಗಿನ ಕಾಲಘಟ್ಟದ ಸ್ಥಿತಿ ಹೇಗಿದೆ ಎಂದರೆ ಕೆಲವು ಜನರು ಒಂದು ವರ್ಷದಲ್ಲಿ ಒಂದಕ್ಕಿಂತ ಹೆಚ್ಚು ಜಲ್ಸಗಳಲ್ಲಿ ಭಾಗವಹಿಸುತ್ತಿದ್ದಾರೆ. ಆದುದರಿಂದ ನೀವು ಪರಿಶೋಧಿಸಿರಿ ನಿಮ್ಮಲ್ಲಿ ಎಂತಹ ಕ್ರಾಂತಿ ತಲೆದೋರಬೇಕಾಗಿದೆ ಎಂದು.

ನಿಸ್ಸಂಶಯವಾಗಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ಒಮ್ಮೆ ಭೇಟಿಯಾಗುವುದು ಹಲವು ಜಲ್ಸಗಳಲ್ಲಿ ಭಾಗವಹಿಸುವುದಕ್ಕಿಂತ ಹೆಚ್ಚು ಮಹತ್ವಪೂರ್ಣವಾಗಿತ್ತು. ಮತ್ತು ಅದರ ಫಲಸ್ವರೂಪವಾಗಿ ಭೇಟಿಯಾಗುವವರಲ್ಲಿ ಕ್ರಾಂತಿ ಸಂಭವಿಸುತ್ತಿತ್ತು. ಆದರೆ ಈಗ ಒಂದರ ನಂತರ ಇನ್ನೊಂದಾಗಿ ಅನೇಕ ಜಲ್ಸಗಳಲ್ಲಿ ಭಾಗವಹಿಸುವುದು ಏನಾದರೂ ಪರಿಶುದ್ಧ ಪರಿವರ್ತನೆಗೆ ಹೇತುವಾಗಲೇಬೇಕಾಗಿದೆ. ಎಂ.ಟಿ.ಎ. ಆಲಿಸುವುದರ ಬಗ್ಗೆ ಸಹ ನಾನು ತಮ್ಮ ಗಮನ ಹರಿಸಲು ಇಚ್ಛಿಸುತ್ತೇನೆ. ಪಾಕಿಸ್ಥಾನದಲ್ಲಿ ಜಲ್ಸ ಜರಗಿಸುವ ಬಗ್ಗೆ ಪ್ರತಿಬಂಧವಿದೆ. ಅಲ್ಲಿನ ಜನರು ಎಂ.ಟಿ.ಎ. ಮೂಲಕ ಕನಿಷ್ಠ ಪಕ್ಷ ಖುತ್‍ಬ ಆಲಿಸಲಿ, ಜಲ್ಸಗಳನ್ನು ವೀಕ್ಷಿಸಲಿ ಮತ್ತು ಅದರ ಪ್ರಕಾರ ಕರ್ಮಗಳನ್ನು ಮಾಡಲು ಪ್ರಯತ್ನ ಮಾಡಲಿ. ಎಂ.ಟಿ.ಎ. ಮೂಲಕ ಜಲ್ಸದ ಕಾರ್ಯಕ್ರಮಗಳನ್ನು ನೋಡಿ, ಆಲಿಸಿ, ಅವುಗಳಿಂದ ಲಾಭ ಪಡೆಯಲು ಪ್ರಯತ್ನಿಸಿದರೆ ಶೇಕಡ ಅರುವತ್ತು ಎಪ್ಪತ್ತರಷ್ಟು ದಾಹ ಶಮನವಾಗಬಹುದು. ಮತ್ತು ಇಚ್ಛಿಸುವುದಾದರೆ ಶೇಕಡ ನೂರರಷ್ಟು ಬದಲಾವಣೆ ಸಂಭವಿಸಬಹುದಾಗಿದೆ. ಆದರೆ ಯುರೋಪಿಗೆ ಆಗಮಿಸಿದ ನಿಮ್ಮೊಂದಿಗೆ ನಾನು ಹೇಳಲು ಬಯಸುವುದೇನೆಂದರೆ ನೀವು ಜಲ್ಸದಲ್ಲಿ ಸ್ವತಃ ಭಾಗವಹಿಸುತ್ತಿರುವಿರಿ. ಕೆಲವರು ಒಂದಕ್ಕಿಂತ ಹೆಚ್ಚು ಜಲ್ಸಗಳಲ್ಲಿ ಭಾಗವಹಿಸುತ್ತಿರುವಿರಿ. ಆದುದರಿಂದ ಇಲ್ಲಿಗೆ ಆಗಮಿಸಿದ ಅಹ್ಮದಿಯರು ತಮ್ಮ ಸ್ಥಿತಿಗಳಲ್ಲಿ ಕ್ರಾಂತಿದಾಯಕ ಪರಿವರ್ತನೆ ಉಂಟುಮಾಡಬೇಕು. ಅಲ್ಲಾಹನು ನಮಗೆ ಒದಗಿಸಿದ ಜಲ್ಸ ಎಂಬ ಈ ಟ್ರೈನಿಂಗ್ ಕ್ಯಾಂಪ್‍ನಿಂದ ಲಾಭ ಪಡೆಯಲು ಸಾಧ್ಯವಾಗುವುದು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಅಪೇಕ್ಷೆ ಪ್ರಕಾರ ನಾವು ಲೋಕವನ್ನು ನಮ್ಮ ಸೇವಕನನ್ನಾಗಿ ಮಾಡಿ ನಮ್ಮಲ್ಲಿ ಪರಿಶುದ್ಧ ಬದಲಾವಣೆ ಉಂಟುಮಾಡುವವರಾಗುವಾಗ ಮಾತ್ರವಾಗಿದೆ. ನೀವು ಜಲ್ಸದ ಕಾರ್ಯಕ್ರಮಗಳನ್ನು ಶ್ರದ್ಧೆಯಿಂದ ಆಲಿಸಿರಿ. ಅನುಷ್ಠಾನಕ್ಕೆ ತರಬೇಕು ಎಂಬ ಸಂಕಲ್ಪದಿಂದ ಆಲಿಸಿರಿ. ಆ ಮೂಲಕ ನೀವು ನಿಮ್ಮಲ್ಲಿ ಪರಿಶುದ್ಧ ಪರಿವರ್ತನೆ ಉಂಟುಮಾಡಲು ಶಕ್ತರಾಗುವಿರಿ.

ಮುಸ್ಲಿಮರ ಇಂದಿನ ಕಾಲದ ಹೀನ ಸ್ಥಿತಿ ಮತ್ತು ಅವನತಿಗೆ ಕಾರಣವೇನೆಂದರೆ ಅವರು ಬಹಳ ದೊಡ್ಡ ದೊಡ್ಡ ವಾಗ್ಮಿಗಳ ಭಾಷಣಗಳನ್ನು ಆಲಿಸುತ್ತಾರೆ. ಆದರೆ ಅವರ ಉಪದೇಶಗಳನ್ನು ಅನುಷ್ಠಾನಕ್ಕೆ ತರುವುದಿಲ್ಲ. ಅವರು ಕಾರ್ಯತಃ ಏನೂ ಮಾಡುವುದಿಲ್ಲ. ಯಾವ ಸಮುದಾಯದಲ್ಲಿ ಸಕ್ರಿಯ ಚಟುವಟಿಕೆಗಳಿಲ್ಲವೋ ಆ ಸಮುದಾಯ ಎಂದೂ ಅಭಿವೃದ್ಧಿಗಳಿಸಲಾರದು. ಲೋಕದಲ್ಲಿ ಮುಸ್ಲಿಮರ ಸ್ಥಿತಿ ಹೇಗಿದೆ ಎಂದರೆ ಅವರಲ್ಲಿ ಮಾತುಗಾರಿಕೆ ತುಂಬಾ ಇದೆ ಆದರೆ ಕರ್ಮಗಳ ಅನುಷ್ಠಾನ ಏನೂ ಇಲ್ಲ. ಅವರು ಸಕ್ರಿಯರಾಗಿರುತ್ತಿದ್ದರೆ ಅವರ ಸ್ಥಿತಿ ಹೀಗೆ ಆಗುತ್ತಿರಲಿಲ್ಲ. ನಾವು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ನಂಬಿರುವುದು ಮುಸ್ಲಿಮರಲ್ಲಿ ತಲೆದೋರಿರುವ ಬಲಹೀನತೆಗಳನ್ನು ದೂರ ಸರಿಸಲಿಕ್ಕಾಗಿದೆ. ಕೇವಲ ಮಾತುಗಳು ಯಾವ ಲಾಭವನ್ನೂ ತರಲಾರವು. ಆದುದರಿಂದ ನೀವು ಇಲ್ಲಿಗೆ ಆಗಮಿಸಿರುವ ಮೂಲ ಉದ್ದೇಶ ನಿಮ್ಮ ಮುಂದೆ ಇರಿಸಿರಿ. ಜಲ್ಸದಲ್ಲಿ ಭಾಗವಹಿಸಿದವರು ಜಲ್ಸದಲ್ಲಿ ಕೇಳಿರುವುದನ್ನು ಅನುಷ್ಠಾನಕ್ಕೆ ತರಲು ಪ್ರಯತ್ನಿಸಬೇಕು. ಅಲ್ಲಾಹನು ಪ್ರತಿಯೊಬ್ಬರಿಗೂ ಜಲ್ಸದಲ್ಲಿ ಭಾಗವಹಿಸುವುದರ ಉದ್ದೇಶಲಕ್ಷ್ಯ ಈಡೇರಿಸುವ ಭಾಗ್ಯ ದಯಪಾಲಿಸಲಿ.

ಜಲ್ಸದ ವ್ಯವಸ್ಥೆಗೆ ಸಂಬಂಧಿಸಿ ಕೆಲವು ಮಾತುಗಳನ್ನು ಹೇಳಲು ಬಯಸುತ್ತೇನೆ: ಜಲ್ಸಕ್ಕೋಸ್ಕರ ನಾವು ಬಳಸುತ್ತಿರುವ ಈ ಸ್ಥಳದ ಪರಿಸರದ ಬಗ್ಗೆ ಜಾಗರೂಕತೆ ವಹಿಸಬೇಕು. ಜಲ್ಸದ ವ್ಯವಸ್ಥಾಪಕರಿಗೆ ತೊಂದರೆ ಆಗುವ ರೀತಿಯಲ್ಲಿ ವರ್ತಿಸಬೇಡಿರಿ. ಹೊರಗೆ ಹೋಗುವಾಗ ನೆರೆ ಹೊರೆಯವರಿಗೆ ತೊಂದರೆ ಉಂಟಾಗದಂತೆ ನಿಗಾವಹಿಸಿರಿ. ಅಹ್ಮದಿಯರು ನೆರೆ ಹೊರೆಯವರ ಬಗ್ಗೆ ಲಕ್ಷ್ಯ ನೀಡುವವರೂ, ನಿಯಮಗಳನ್ನು ಪಾಲಿಸುವವರೂ, ಹೆಚ್ಚಿನ ಸಂಖ್ಯೆಯಲ್ಲಿ ಜಲ್ಸದಲ್ಲಿ ಭಾಗವಹಿಸಿದರೂ ಯಾವುದೇ ರೀತಿಯ ಕಿರುಕುಳ ಜನರಿಗೆ ನೀಡುವವರಾಗಿಲ್ಲ ಎಂದು ಇಲ್ಲಿನ ಮುಸ್ಲಿಮೇತರ ಜನರಿಗೆ

ಮನವರಿಕೆ ಆಗುವಂತೆ ವರ್ತಿಸಿ ಇಸ್ಲಾಮಿನ ಸರಿಯಾದ ಚಿತ್ರ ಅವರಿಗೆ ದೊರಕುವಂತೆ ಮಾಡಿರಿ.

ಜಲ್ಸದ ದಿನಗಳಲ್ಲಿ ಪ್ರಾರ್ಥನೆ ಮಾಡುತ್ತಾ ಇರಬೇಕು. ದುರೂದ್ ಪಠಿಸಬೇಕು, ಝಿಕ್ರೆ ಇಲಾಹಿ ಮಾಡುತ್ತಾ ಇರಬೇಕು. ನಾನು ಹಿಂದೆ ಹೇಳಿದ ಹಾಗೆ ಜಲ್ಸದ ಭಾಷಣಗಳನ್ನು ಲಕ್ಷ್ಯವಿಟ್ಟು ಆಲಿಸಿರಿ. ಜಲ್ಸದ ಪ್ರತಿಯೊಂದು ಕಾರ್ಯಕ್ರಮದಲ್ಲಿ ಭಾಗವಹಿಸಿರಿ ಮತ್ತು ಭಾಷಣಗಳನ್ನು ಆಲಿಸಿರಿ. ಆ ರೀತಿ ನೀವು ನಿಮ್ಮ ಮಕ್ಕಳನ್ನು ಮತ್ತು ಮುಂದಿನ ಪೀಳಿಗೆಯನ್ನು ತರಬೇತಿ ಮಾಡಬಲ್ಲಿರಿ. ಮತ್ತು ಜಲ್ಸದ ಮಹತ್ವದ ಬಗ್ಗೆ ಅವರಲ್ಲಿ ಪ್ರಜ್ಞೆ ಹುಟ್ಟಿಸಬಲ್ಲಿರಿ. ಜಲ್ಸದ ಸಂದರ್ಭದಲ್ಲಿ ಪರಸ್ಪರ ಜಗಳ ಸಹ ಸಂಭವಿಸುತ್ತದೆ. ಪುರಾತನ ಮನಸ್ತಾಪಗಳಿರುತ್ತವೆ. ಜಲ್ಸದಲ್ಲಿ ಬಂದು ಸೇರುವಾಗ ಅವುಗಳು ಉಬ್ಬಿ ಬರುತ್ತವೆ. ಇಲ್ಲಿನ ಪರಿಸರವನ್ನು ಸಂಪೂರ್ಣವಾಗಿ ಪರಿಶುದ್ಧವಾಗಿರಿಸಿರಿ. ಒಬ್ಬರಿನ್ನೊಬ್ಬರ ಹೃದಯಕ್ಕೆ ನೋವುಂಟಾಗುವಂತೆ ವರ್ತಿಸಬಾರದು. ಜನರಲ್ಲಿ ತಪ್ಪು ಭಾವನೆ ಉಂಟಾಗದಂತೆ ವರ್ತಿಸಿರಿ. ಅಲ್ಲಾಹು ಎಲ್ಲಾ ರೀತಿಗಳಲ್ಲೂ ಜಲ್ಸವನ್ನು ಅನುಗ್ರಹಭರಿತವನ್ನಾಗಿ ಮಾಡಲಿ. ಎಲ್ಲಾ ಜನರು ಜಲ್ಸದ ದಿನಗಳಲ್ಲಿ ದುಆ ಮಾಡುತ್ತಾ ಇರಬೇಕು. ನಮಾಝ್‌ಗಳ ಬಗ್ಗೆ ಸಹ ಲಕ್ಷ್ಯ ನೀಡಿರಿ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ದುಆಗಳ ವಾರೀಸುದಾರರನ್ನಾಗಿ ಅಲ್ಲಾಹನು ನಿಮ್ಮನ್ನು ಮಾಡಲಿ – ಆಮೀನ್.

——————*****——————

***Friday Sermon delivered by Hadrath Khaleefatul Masih Al Khamis*** *(atba)*

*At. Brussels, Belgium. On 14-09-2018.*

**Summarized by** *Majlis Ansarullah Bharat*

***Kannada Translation:*** M. Ubeidullah for Kannada Desk, Qadian

***Reviewed by:*** M.P Ibrahim | ***Typing:*** U Basheer Ahmad

***Published By:*** Kannada Isha'at Team for Nazarath Nashr-O-Isha'ath, Qadian

***Email***: *khutuba.kannada@gmail.com*

**You can find all the Sermons archived at**: www.alislam.org/friday-sermon